

# ಕಲೆಯಲ್ಲ ಜೇಡರ ಬಲೆ!



ಸಾಮಾನ್ಯವಾಗಿ ಜೇಡರ ಹುಳುಗಳು ಮನೆಯೊಳಗೆ ನೆಲ–ಗೋಡೆಗಳ ಅಂಚಿನಲ್ಲಿ, ಗಿಡಗಂಟಿಗಳ ಮಧ್ಯೆ ಬಲೆ ಹೆಣೆಯುತ್ತವೆ. ಈ ಬಲೆಯ ಮೂಲಕವೇ ತಮ್ಮ ಆಹಾರವನ್ನು ಸಂಗ್ರಹಿಸಿ ತಿನ್ನುತ್ತವೆ. ಆದರೆ ಲಕ್ಷಾನುಗಟ್ಟಲೆ ಜೇಡ ಹುಳುಗಳು ಇದ್ದಕ್ಕಿದ್ದ ಹಾಗೆ ನೆಲ ಬಿಟ್ಟು ಮರವನ್ನು ಆಶ್ರಯಿಸಿ, ವಿಶಿಷ್ಟವಾಗಿ ಅತ್ಯಂತ ದೊಡ್ಡ ಪ್ರಮಾಣದಲ್ಲಿ ಬಲೆ ಹೆಣೆದದ್ದು ನೋಡಿದಾಗ ನಿಜಕ್ಕೂ ಅಚ್ಚರಿಯಾಗುತ್ತದೆ.

ಈ ಅತ್ಯಾಕರ್ಷಕ ಜೇಡರ ಬಲೆ ಕಾಣಸಿಗುವುದು ಪಾಕಿಸ್ತಾನದಲ್ಲಿ. ಅದೂ ಕಳೆದ ವರ್ಷ ಇಲ್ಲಿ ಅನಿರೀಕ್ಷಿತ ಪ್ರವಾಹ ಬಂತು. ನೆಲದಲ್ಲಿ ಆಶ್ರಯ ಪಡೆದ ಜೇಡಗಳು ಪ್ರವಾಹದಲ್ಲಿ ಬಂದ ನೀರಿನಿಂದ ಕೊಚ್ಚಿಹೋಗುವುದನ್ನು ತಪ್ಪಿಸಿಕೊಳ್ಳಲು ಮರವನ್ನು ಆಶ್ರಯಿಸಿದವು. ಇದೇ ಇಷ್ಟೊಂದು ದೊಡ್ಡ ಪ್ರಮಾಣದ ಜೇಡರಬಲೆ ಹೆಣೆಯಲು ಕಾರಣವಾಯಿತು. ಪ್ರವಾಹದ ನೀರಿಗೆ ಅಂಜಿ ಮರದಲ್ಲೇ ಬಲೆ ಕಟ್ಟಿಕೊಳ್ಳುತ್ತಾ ಅಲ್ಲೇ ಬೀಡುಬಿಟ್ಟಿವೆ. ಎಲೆಗಳನ್ನು ಪೂರ್ತಿಯಾಗಿ ಆವರಿಸಿ ಬೃಹದಾಕಾರದ ನೆಟ್‌ನಂತೆ ಕಾಣುವ ಜೇಡರ ಬಲೆ, ಇದೀಗ ಸುಂದರ ಚಿತ್ತಾರ ಎಂದು ನೋಡುಗರ ಮೆಚ್ಚುಗೆಗೂ ಪಾತ್ರವಾಗಿದೆ.

ಪಾಕಿಸ್ತಾನದ ಕರಾಚಿ ಮುಂತಾದ ಕಡೆಗಳಲ್ಲಿನ ಜನ 'ನಾವು ಇದುವರೆಗೂ ಈ ರೀತಿಯ ಚಿತ್ರಣವನ್ನು ನೋಡೇ ಇಲ್ಲ' ಎಂದು ಉದ್ಗಾರ ಎತ್ತುತ್ತಾರೆ.

■ ಯು. ಅನಂತ್